ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು) :-

ಅ) ಹೌದು

ಆ) ಸಂಚಾರ ಹಾಗೂ ಜನ ಸಂದಣಿಯನ್ನು ನಿಯಂತ್ರಿಸಲು ಸದ್ರಿ ವೃತ್ತದ ಬಳಿ ಸಂಚಾರಿ ಪೋಲೀಸ್ ಸಿಬ್ಬಂದಿಯನ್ನು ಸಾಕಷ್ಟು ಸಂಖ್ಯೆಯಲ್ಲಿ ನೇಮಿಸಲಾಗಿದೆ. ಸದ್ರಿ ವರ್ತುಳ ದಲ್ಲಿ ಸಂಚಾರ ನಿಯಂತ್ರಣಕ್ಕಾಗಿ ಸಂಚಾರ ನಿಯಂತ್ರಣ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದ್ದು, ಸದ್ರಿ ದೀಪಗಳಿಗೆ ವಿದ್ಯುತ್ ಸಂಪರ್ಕವನ್ನು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ನೀಡಬೇಕಾಗಿರುತ್ತದೆ.

ವಿಷಯ :- ಮುಜರಾಯಿ ದೇವಸ್ಥಾನದ ಅರ್ಚಕರ ವೇತನವನ್ನು ಏರಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2295 (2737)

ಶ್ರೀ ಆರ್. ಕೃಷ್ಣಪ್ಪ, (ಜಯಮಹಲ್) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯದ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು ;

(ಆ) ಇವುಗಳಲ್ಲಿ ಎಷ್ಟು ಜನ ಅರ್ಚಕರಿದ್ದಾರೆ.

(ಇ) ಮುಜರಾಯಿ ದೇವಸ್ಥಾನಗಳು ಹಾಗೂ ಇತರ ದೇವಸ್ಥಾನ ಬೋರ್ಡ್‌ಗಳಿಗೆ ಸೇರಿದ ದೇವಸ್ಥಾನಗಳಲ್ಲಿ ಅರ್ಚಕರಿಗೆ ನೀಡುತ್ತಿರುವ ಸರಾಸರಿ ಮಾಸಿಕ ವೇತನ ಎಷ್ಟು;

(ಈ) ಅರ್ಚಕರಿಗೆ ನೀಡುತ್ತಿರುವ ಮಾಸಿಕ ವೇತನವನ್ನು ಏರಿಸಲು ಸರ್ಕಾರ ಉದ್ದೇಶಿಸಿ ದೆಯೇ?

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) :-

(ಅ) ಒಟ್ಟು 37,778 ದೇವಸ್ಥಾನಗಳು.

(ಆ) 18, 705 ಜನ ಅರ್ಚಕರಿದ್ದಾರೆ.

(ಇ) ಕನಿಷ್ಠ ಮಾಸಿಕ ರೂ. 500 ರೂ. ಗಳಿಂದ ಗರಿಷ್ಠ ರೂ. 2600-00 ಪ್ರತಿಯೊಂದು ಮುಜರಾಯಿ ದೇವಾಲಯವು ತನ್ನ ಆದಾಯದ ಮೇರೆಗೆ ವೆಚ್ಚವನ್ನು ಮಾಡುವುದರಿಂದ ವೇತನ ದಲ್ಲಿ ವ್ಯತ್ಯಾಸ ಬಹಳ ಆದುದರಿಂದ ಕನಿಷ್ಠ ಮತ್ತು ಗರಿಷ್ಠ ವೇತನವನ್ನು ನೀಡಿದೆ ವ್ಯತ್ಯಾಸ ಬಹಳವಾದ್ದರಿಂದ ಸರಾಸರಿ ಲೆಕ್ಕ ಮಾಡುವುದು ಕಷ್ಟ.

(ಈ) ಪರಿಶೀಲಿಸಲಾಗುತ್ತಿದೆ.